DFA/666650

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 292
2. ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 17/02/2022
4. ಉತ್ತರಿಸುವ ಸಚಿವರ ಹೆಸರು : ಮುಖ್ಯಮಂತ್ರಿಗಳು.

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯ ಹುಜೂರ್ ಖಜಾನೆ ಎಂದರೇನು; ಇದನ್ನು ಯಾವಾಗ ಸ್ಥಾಪಿಸಲಾಯಿತು; ಇದರ ಇತಿಹಾಸವೇನು; ಇದರಲ್ಲಿ ಎಷ್ಟು ವಿಧಗಳಿವೆ; ಇದರ ಕಾರ್ಯವೈಖರಿ "ಏನು" (ವಿವರವಾದ ಮಾಹಿತಿ ನೀಡುವುದು) | ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇದು ಕರ್ನಾಟಕ ರಾಜ್ಯ ಪುನರ್ ರಚನೆಯಾದ ಕಾಲದಿಂದಲೂ (1956) ಕಾರ್ಯನಿರ್ವಹಿಸುತ್ತಿದ್ದು, ಆಗಿಂದಾಗ್ಗೆ ಪುನರ್ ರಚನೆಗೊಂಡಿರುತ್ತದೆ.<br><br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 27ರಲ್ಲಿ ವಿವರಿಸಿರುವಂತೆ ರಾಜ್ಯ ಹುಜೂರ್ ಖಜಾನೆಯು ಬೆಂಗಳೂರು ನಗರದಲ್ಲಿ ಪಾವತಿಯಾಗುವ ಎಲ್ಲಾ ವೇತನ, ಸಿಬ್ಬಂದಿ, ಪ್ರಯಾಣ ಭತ್ಯೆ, ಸಾದಿಲ್ವಾರು ಹಾಗೂ ಇತರೆ ಬಿಲ್ಲುಗಳನ್ನು ಪಾವತಿಸುವ ಖಜಾನೆಯಾಗಿರುತ್ತದೆ. ಅದರಂತೆ ಬೆಂಗಳೂರು ನಗರದಲಿನ ಸಚಿವಾಲಯ, ನ್ಯಾಯಾಲಯಗಳು ಹಾಗೂ ವಿವಿಧ ಇಲಾಖೆಗಳ ರಾಜ್ಯ ವಲಯದ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತಿದೆ. ರಾಜ್ಯ ಹುಜೂರ್ ಖಜಾನೆ ಹಾಗೂ ಏಜೆನ್ಸಿ ಬ್ಯಾಂಕ್ ಆದ ಆರ್.ಬಿ.ಐ ನಲ್ಲಿ ಕೆಲಸದ ಒತ್ತಡ ಹೆಚ್ಚಳವಾದುದರಿಂದ, 1970ರಲ್ಲಿ ರಾಜ್ಯ ಹುಜೂರ್ ಖಜಾನೆಯನ್ನು ಪುನರ್ ಘಟಿಸಲಾಯಿತು. ಅದರಂತೆ ಜಮೆಗಳು, ಠೇವಣಿಗಳು, ಪಿಂಚಣಿ ಬೆಂಗಳೂರು ವ್ಯಾಪ್ತಿಯ ಉಪ ಖಜಾನೆಗಳು ಇತ್ಯಾದಿ ಕೆಲಸಗಳನ್ನು ನೂತನವಾಗಿ ಸ್ಥಾಪಿಸಲಾದ ಜಿಲ್ಲಾ ಖಜಾನೆಗಳಿಗೆ ವರ್ಗಾಯಿಸಲಾಗಿದೆ.<br><br>ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ ಆಇ 107 ಆಖಇ 2020 ದಿನಾಂಕ:11-08-2021ರಲ್ಲಿ ರಾಜ್ಯ ಹುಜೂರ್ ಖಜಾನೆಯನ್ನು ಎರಡು ಭಾಗಗಳಾಗಿ ವಿಭಜಿಸಿ ರಾಜ್ಯ ಹುಜೂರ್ ಖಜಾನೆ ಹಾಗೂ ಅಪರ ರಾಜ್ಯ ಹುಜೂರ್ ಖಜಾನೆ ಎಂದು ಎರಡು ಖಜಾನೆಗಳಾಗಿ ಪುನರ್ ವಿಂಗಡಿಸಿ ಆದೇಶಿಸಲಾಗಿದೆ. |



Generated from eOffice by G JAGADEESHA, CMO-JS(GJ), JOINT SECREATRY, CMO on 17/02/2022 10:34 AM

| | |
|---|---|
| (ಆ) ಲೆಕ್ಕ ಶೀರ್ಷಿಕೆಗಳು ಅಂದರೇನು; ಇವುಗಳಲ್ಲಿ ಎಷ್ಟು ವಿಧ; ಅವು ಯಾವುವು; ರಾಜ್ಯ ಸರ್ಕಾರದಲಿ ಹಾಲಿ ಜಾರಿಯಲ್ಲಿರುವ ಲೆಕ್ಕ ಶೀರ್ಷಿಕೆಗಳಾವುವು; ಇವುಗಳನ್ನು ಯಾವಾಗಿನಿಂದ ರಾಜ್ಯ ಸರ್ಕಾರದಲ್ಲಿ ಜಾರಿಗೆ ತರಲಾಗಿದೆ, | ಅನುಬಂಧ-1ರಲ್ಲಿ ನೀಡಲಾಗಿದೆ. |
| (ಇ) ಸರ್ಕಾರದ ಭದ್ರತಾ ಪತ್ರಗಳು ಎಂದರೇನು; ಇವುಗಳಲಿ ಎಷ್ಟು ವಿಧ; ಇವುಗಳಿಗಿರುವ ಮಹತ್ವವೇನು; 2019-20, 2020-21, ಮತ್ತು 2021-22ನೇ ಸಾಲಿನಲಿ ಎಷ್ಟು ಭದ್ರತಾ ಪತ್ರಗಳನ್ನು ಎಲ್ಲಿ ಹರಾಜು ಮಾಡಲಾಗಿದೆ; ಇದರಿಂದ ಬಂದ ಹಣವೆಷ್ಟು; ಈ ಹಣವನ್ನು ಯಾವ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ರಾಜ್ಯದ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಅನುಬಂಧ-2ರಲ್ಲಿ ನೀಡಲಾಗಿದೆ. |
| (ಈ) ಸರ್ಕಾರದ ಭದ್ರತಾ ಪತ್ರಗಳಿಂದ ಬಂದ ಹಣವನು ಬಜೆಟ್‌ಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆಯೇ; ಹಾಗಾದಲಿ ಕೊರತೆ ಬಜೆಟ್ ಎಷ್ಟು; (ಕಳೆದ 3 ವರ್ಷಗಳ ಮಾಹಿತಿ ನೀಡುವುದು) | |
| (ಉ) ಸರ್ಕಾರದ ಭದ್ರತಾ ಪತ್ರಗಳನ್ನು ರಾಜ್ಯದ ಜನರು ಖರೀದಿಸಬಹುದೇ; ಹಾಗಿದಲ್ಲಿ ಯಾವ ರೀತಿ ಖರೀದಿ ಮಾಡಬಹುದು; ಇದರ ಸಂಬಂಧ ಸರ್ಕಾರ ನೀಡಿರುವ ರಿಯಾಯಿತಿಗಳೇನು; ಹಾಗೂ ಸರ್ಕಾರ ಇದಕ್ಕೆ ನೀಡುವ ಬಡ್ಡಿ ಎಷ್ಟು? (ವಿವರವಾದ ಮಾಹಿತಿ ನೀಡುವುದು) | |

**ಸಂಖ್ಯೆ: ಆಇ 11 ಆಖಇ 2022.**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 17/02/2022 10:34 AM

## ಅನುಬಂಧ-1

ಸರ್ಕಾರದ ಜಮೆ ಮತ್ತು ವೆಚ್ಚಗಳನ್ನು ವರ್ಗೀಕರಿಸುವ ಮತ್ತು ದಾಖಲಿಸುವ ಹಾಗೂ ಲೆಕ್ಕ ಮಾಡುವ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆಗಳನ್ನು ಉಪಯೋಗಿಸಲಾಗುತ್ತದೆ.

ಭಾರತೀಯ ಸಂವಿಧಾನದ ಅನುಚ್ಛೇದ 150 ರನ್ವಯ ಸರ್ಕಾರದ ಲೆಕ್ಕಗಳನ್ನು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸುವ ಮತ್ತು ನಿರ್ವಹಿಸುವ ಅಧಿಕಾರವನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ನೀಡಲಾಗಿದೆ.

ದಿನಾಂಕ: 01.04.1974 ರಿಂದ 3 ಅಂಕಿಯ ಪ್ರಧಾನ ಲೆಕ್ಕ ಶೀರ್ಷಿಕೆ ಉಪಯೋಗಿಸಿ ಲೆಕ್ಕವನ್ನು ನಿರ್ವಹಿಸಲಾಗುತ್ತಿತ್ತು. ಅನಂತರ, ದಿನಾಂಕ: 01.04.1987 ರಿಂದ ಜಾರಿಗೆ ಬಂದ ಲೆಕ್ಕ ಪದ್ಧತಿಯ ಅನ್ವಯ 4 ಅಂಕಿಗಳ ಪ್ರಧಾನ ಲೆಕ್ಕ ಶೀರ್ಷಿಕೆಯನ್ನು ಅಳವಡಿಸಿಕೊಳ್ಳಲಾಗಿದೆ. ಅದರಂತೆ, ಭಾರತ ಸರ್ಕಾರದ ಲೆಕ್ಕ ಪತ್ರಗಳ ಮಹಾನಿಯಂತ್ರಕರ ಸೂಚನೆಯನ್ವಯ ಭಾರತ ಸರ್ಕಾರದ ಮತ್ತು ರಾಜ್ಯಗಳ ರಾಜಸ್ವ ಜಮೆ ಮತ್ತು ವೆಚ್ಚಗಳನ್ನು 15 ಅಂಕಿಗಳ ಲೆಕ್ಕ ಶೀರ್ಷಿಕೆ ಮೂಲಕ ನಿರ್ವಹಿಸಲಾಗುತ್ತಿದೆ.

ಭಾರತ ಸರ್ಕಾರದ ಲೆಕ್ಕ ಪತ್ರಗಳ ಮಹಾನಿಯಂತ್ರಕರು, ಸೂಚಿಸುವ ಲೆಕ್ಕ ಶೀರ್ಷಿಕೆಗಳನ್ನು ಕರ್ನಾಟಕವು ಸೇರಿದಂತೆ ಎಲ್ಲಾ ರಾಜ್ಯಗಳು ಅಳವಡಿಸಿಕೊಂಡಿರುತ್ತವೆ. ಈ 15 ಅಂಕಿಗಳ ಲೆಕ್ಕ ಶೀರ್ಷಿಕೆಯ ವಿವರಗಳು ಕೆಳಕಂಡಂತೆ ಇರುತ್ತದೆ.

ಉದಾಹರಣೆಗೆ- ಭಾಗ್ಯಲಕ್ಷ್ಮಿ ಯೋಜನೆಯ 15 ಅಂಕಿಯ ಲೆಕ್ಕ ಶೀರ್ಷಿಕೆ:2235-02-102-0-25-100

| **ವಿವರ** | **ಅಂಕಿ ಅಂಶಗಳು** | **ಉದಾಹರಣೆಗೆ** |
|---|---|---|
| ಪ್ರಧಾನ ಲೆಕ್ಕ ಶೀರ್ಷಿಕೆ (Major Head) | 4 | 2235-ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ |
| ಉಪ ಪ್ರಧಾನ ಲೆಕ್ಕ ಶೀರ್ಷಿಕೆ (Sub Major Head) | 2 | 02- ಸಮಾಜ ಕಲ್ಯಾಣ |
| ಒಳ ಶೀರ್ಷಿಕೆ (Minor Head) | 3 | 102 - ಮಕ್ಕಳ ಕಲ್ಯಾಣ |
| ಗುಂಪು ಉಪ ಶೀರ್ಷಿಕೆ (Group Sub Head) | 1 | 0- |
| ಉಪ ಶೀರ್ಷಿಕೆ (Sub Head) | 2 | 25-ಭಾಗ್ಯ ಲಕ್ಷ್ಮಿ ಯೋಜನೆ |
| ಉದ್ದೇಶ ಲೆಕ್ಕ ಶೀರ್ಷಿಕೆ (Object Head) | 3 | 100 - ಧನ ಸಹಾಯ |

ಭಾರತ ಸರ್ಕಾರವು ಸೇರಿದಂತೆ ಎಲ್ಲಾ ರಾಜ್ಯಗಳು ಒಳಶೀರ್ಷಿಕೆ (Minor Head) ವರೆಗೆ ಒಂದೇ ರೀತಿಯ ಉದ್ದೇಶಕ್ಕಾಗಿ ನಿಗಧಿಪಡಿಸಿದ ಲೆಕ್ಕ ಶೀರ್ಷಿಕೆಗಳನ್ನು ಮಾತ್ರ ಉಪಯೋಗಿಸಬೇಕು.

ಭಾರತ ಸರ್ಕಾರದ ಲೆಕ್ಕ ಪತ್ರಗಳ ಮಹಾನಿಯಂತ್ರಕರ ಕಚೇರಿಯ ಎಲ್.ಎಂ.ಎಂ.ಹೆಚ್. (List of Major and Minor Heads) ರನ್ವಯ ಲೆಕ್ಕ ಶೀರ್ಷಿಕೆಗಳಲ್ಲಿ ಕೆಳಕಂಡ ವಿಧಗಳು ಇರುತ್ತವೆ.

1. ರಾಜಸ್ವ ಲೆಕ್ಕ ಶೀರ್ಷಿಕೆ -0005 ರಿಂದ 1606 ರವರೆಗೆ
2. ವೆಚ್ಚ ಲೆಕ್ಕ ಶೀರ್ಷಿಕೆ - 2011 ರಿಂದ 3606 ರವರೆಗೆ
3. ಬಂಡವಾಳ ಜಮಾ ಲೆಕ್ಕ ಶೀರ್ಷಿಕೆ - 4000 ರವರೆಗೆ
4. ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ - 4046 ರಿಂದ 5475 ರವರೆಗೆ
5. ಸಾರ್ವಜನಿಕ ಋಣ ಲೆಕ್ಕ ಶೀರ್ಷಿಕೆ - 6001 ರಿಂದ 6005 ರವರೆಗೆ
6. ಸಾಲ ಮತ್ತು ಮುಂಗಡಗಳು ಲೆಕ್ಕ ಶೀರ್ಷಿಕೆ-6075 ರಿಂದ 7615 ರವರೆಗೆ
7. ಸಾದಿಲ್ವಾರು ನಿಧಿ ಲೆಕ್ಕ ಶೀರ್ಷೀಕೆ- 8000
8. ಸಾರ್ವಜನಿಕ ಲೆಕ್ಕದ ಲೆಕ್ಕ ಶೀರ್ಷಿಕೆ - 8001 ರಿಂದ 8999 ರವರೆಗೆ

ಕ್ರಮ ಸಂಖ್ಯೆ: 1, 2, 4 & 6 ಲೆಕ್ಕ ಶೀರ್ಷಿಕೆಗಳು ಇಲಾಖಾವಾರು ಇರುತ್ತದೆ.

**ಇಲಾಖಾವಾರು ಲೆಕ್ಕ ಶೀರ್ಷಿಕೆಗಳ ವಿವರ**

| ಕ್ರ.ಸಂ. | ಇಲಾಖೆಗಳು | ರಾಜಸ್ವ ಲೆಕ್ಕ ಶೀರ್ಷಿಕೆಗಳು | ಬಂಡವಾಳ ಲೆಕ್ಕ ಶೀರ್ಷಿಕೆಗಳು | ಸಾರ್ವಜನಿಕ ಋಣ, ಸಾಲ ಮತ್ತು ಮುಂಗಡಗಳ ಲೆಕ್ಕ ಶೀರ್ಷಿಕೆಗಳು | ಒಟ್ಟು ಲೆಕ್ಕ ಶೀರ್ಷಿಕೆಗಳು |
|---|---|---|---|---|---|
| 1. | ಕೃಷಿ | 52 | 5 | 0 | 57 |
| 2. | ರೇಷ್ಮೆ | 14 | 3 | 0 | 17 |
| 3. | ತೋಟಗಾರಿಕೆ | 24 | 3 | 0 | 27 |
| 4. | ಮೀನುಗಾರಿಕೆ | 20 | 5 | 0 | 25 |
| 5. | ಪಶುಸಂಗೋಪನೆ | 27 | 3 | 0 | 30 |
| 6. | ಆರ್ಥಿಕ | 54 | 4 | 9 | 67 |
| 7. | ಇ-ಆಡಳಿತ | 6 | 0 | 0 | 6 |
| 8. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 66 | 4 | 0 | 70 |
| 9. | ಒಳಾಡಳಿತ | 57 | 8 | 0 | 65 |

| | | | | | |
|---|---|---|---|---|---|
| 10. | ಸಾರಿಗೆ | 26 | 7 | 0 | 33 |
| 11. | ಮೂಲಭೂತ ಸೌಕರ್ಯ | 14 | 14 | 0 | 28 |
| 12 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 62 | 9 | 0 | 71 |
| 13 | ಅರಣ್ಯ | 56 | 5 | 0 | 61 |
| 14 | ಪರಿಸರ ಮತ್ತು ಜೀವಿಶಾಸ್ತ್ರ | 7 | 0 | 0 | 7 |
| 15 | ಸಹಕಾರ | 23 | 2 | 2 | 27 |
| 16 | ಹಿಂದುಳಿದ ವರ್ಗಗಳ ಕಲ್ಯಾಣ | 25 | 12 | 0 | 37 |
| 17 | ಪರಿಶಿಷ್ಟ ಜಾತಿಗಳ ಕಲ್ಯಾಣ | 38 | 8 | 0 | 46 |
| 18 | ಪರಿಶಿಷ್ಟ ಪಂಗಡಗಳ ಕಲ್ಯಾಣ | 23 | 6 | 0 | 29 |
| 19 | ಅಲ್ಪಸಂಖ್ಯಾತರ ಕಲ್ಯಾಣ | 22 | 3 | 0 | 25 |
| 20 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 73 | 10 | 1 | 84 |
| 21. | ಪ್ರವಾಸೋದ್ಯಮ | 13 | 5 | 0 | 18 |
| 22. | ವಾರ್ತೆ | 16 | 1 | 0 | 17 |
| 23. | ಯುವಜನ ಸೇವೆಗಳು | 18 | 3 | 0 | 21 |
| 24 | ಆಹಾರ ಮತ್ತು ನಾಗರೀಕ ಸರಬರಾಜು | 23 | 1 | 0 | 24 |
| 25 | ಕಂದಾಯ | 107 | 10 | 0 | 117 |
| 26 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 15 | 0 | 0 | 15 |
| 27 | ವಸತಿ | 18 | 1 | 0 | 19 |
| 28 | ಉನ್ನತ ಶಿಕ್ಷಣ | 60 | 8 | 0 | 68 |
| 29 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 53 | 8 | 0 | 61 |
| 30. | ಗಣಿ | 6 | 1 | 0 | 7 |

| | | | | | |
|---|---|---|---|---|---|
| 31 | ಕೈಮಗ್ಗ ಮತ್ತು ಜವಳಿ | 8 | 0 | 0 | 8 |
| 32 | ಸಣ್ಣ ಕೈಗಾರಿಕೆ | 16 | 1 | 0 | 17 |
| 33 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 11 | 1 | 5 | 17 |
| 34 | ನಗರಾಭಿವೃದ್ಧಿ | 232 | 16 | 6 | 254 |
| 35 | ಲೋಕೋಪಯೋಗಿ | 45 | 20 | 0 | 65 |
| 36 | ಭಾರಿ ನೀರಾವರಿ | 32 | 19 | 0 | 51 |
| 37 | ಸಣ್ಣ ನೀರಾವರಿ | 29 | 11 | 0 | 40 |
| 38 | ಆರೋಗ್ಯ | 58 | 10 | 0 | 68 |
| 39 | ವೈದ್ಯಕೀಯ ಶಿಕ್ಷಣ | 41 | 20 | 0 | 61 |
| 40. | ಕಾರ್ಮಿಕ | 15 | 1 | 0 | 16 |
| 41 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 39 | 3 | 0 | 42 |
| 42 | ಇಂಧನ | 5 | 1 | 1 | 7 |
| 43 | ಕನ್ನಡ ಮತ್ತು ಸಂಸ್ಕೃತಿ | 33 | 2 | 0 | 35 |
| 44 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 25 | 6 | 0 | 31 |
| 45 | ಕಾನೂನು | 24 | 1 | 0 | 25 |
| 46 | ಸಂಸದೀಯ ವ್ಯವಹಾರಗಳು | 31 | 0 | 0 | 31 |
| 47 | ಋಣ ಮೇಲುಸ್ತುವಾರಿ | 208 | 0 | 27 | 235 |
| | **ಒಟ್ಟು** | **1870** | **261** | **51** | **2182** |

**ಸಂಖ್ಯೆ: ಆಇ 11 ಆಖಇ 2022.**

## ಅನುಬಂಧ-2

ಸರ್ಕಾರವು ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಮತ್ತು ಬಂಡವಾಳ ಆಸ್ತಿ ಸೃಜಿಸಲು ಸಾಲವನ್ನು ಪಡೆಯುತ್ತದೆ. ಇದರಲ್ಲಿ ಅಂತರಿಕ ಸಾಲ ಅಂದರೆ ಮುಕ್ತಮಾರುಕಟ್ಟೆ ಸಾಲ & ನಬಾರ್ಡ್ ಸಾಲ ಇರುತ್ತದೆ.

ಮುಕ್ತ ಮಾರುಕಟ್ಟೆಯಲ್ಲಿ ಸಾಲವನ್ನು ಪಡೆಯಲು ಸರ್ಕಾರದ ಭದ್ರತಾ ಪತ್ರಗಳನ್ನು ಹೊರಡಿಸಲಾಗುತ್ತದೆ.

ಇವುಗಳಲ್ಲಿ ಮೂರು ವಿಧಗಳಿರುತ್ತವೆ.

1. ಖಜಾನೆ ಬಿಲ್ಲುಗಳು
2. ಹಣಕಾಸು ನಿರ್ವಹಣೆ ಬಿಲ್ಲುಗಳು
3. ದಿನಾಂಕ ಸಹಿತ ಸರ್ಕಾರದ ಭದ್ರತಾ ಪತ್ರಗಳು

ಖಜಾನೆ ಬಿಲ್ಲುಗಳು ಮತ್ತು ಹಣಕಾಸು ನಿರ್ವಹಣೆ ಬಿಲ್ಲುಗಳನ್ನು ಕೇಂದ್ರ ಸರ್ಕಾರವು ಅಲ್ಪಾವಧಿಯಲ್ಲಿ ಸ್ವೀಕೃತಿ ಮತ್ತು ವೆಚ್ಚದ ಕೊರತೆಯನ್ನು ಸರಿದೂಗಿಸಲು ಬಳಸುತ್ತದೆ. ರಾಜ್ಯ ಸರ್ಕಾರಗಳು ಇವುಗಳನ್ನು ಉಪಯೋಗಿಸಲು ಬರುವುದಿಲ್ಲ.

ದಿನಾಂಕ ಸಹಿತ ಸರ್ಕಾರದ ಭದ್ರತಾ ಪತ್ರಗಳು ದೀರ್ಘಾವಧಿ ಭದ್ರತಾ ಪತ್ರಗಳಾಗಿರುತ್ತವೆ. ರಾಜ್ಯ ಸರ್ಕಾರಗಳ ಭದ್ರತಾ ಪತ್ರಗಳನ್ನು ರಾಜ್ಯ ಅಭಿವೃದ್ಧಿ ಸಾಲಗಳೆಂದು ಸಹ ಕರೆಯಲಾಗುತ್ತದೆ. ಇವುಗಳಿಗೆ ನಿರ್ದಿಷ್ಟ ಬಡ್ಡಿ ದರದಲ್ಲಿ ಬಡ್ಡಿಯನ್ನು ಅರ್ಧವಾರ್ಷಿಕವಾಗಿ ಪಾವತಿಸಬೇಕಾಗುತ್ತದೆ ಹಾಗೂ ಪರಿಪಕ್ವಗೊಂಡ (Maturity) ದಿನಾಂಕ ದಂದು ಪೂರ್ಣ ಮೊತ್ತದ ಅಸಲನ್ನು ಪಾವತಿಸಬೇಕಾಗುತ್ತದೆ.

ಒಟ್ಟಾರೆ ಸ್ವೀಕೃತಿ ಮತ್ತು ಒಟ್ಟಾರೆ ವೆಚ್ಚದ ವ್ಯತ್ಯಾಸವನ್ನು ಆರ್ಥಿಕ ಕೊರತೆ ಎಂದು ಕರೆಯಲಾಗುವುದು. ಕೆ.ಎಫ್ ಆರ್ ಎ ನಿಯಮಗಳ ಅನ್ವಯ ಜಿ.ಎಸ್.ಡಿ.ಪಿ.ಯ ಶೇ. 3% ರವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ಈ ಸಾಲದಲ್ಲಿ ಮುಕ್ತ ಮಾರುಕಟ್ಟ ಸಾಲ, ನಬಾರ್ಡ್ ಸಾಲ ಮತ್ತು ಭಾರತ ಸರ್ಕಾರದ ಸಾಲಗಳು ಒಳಗೊಂಡಿರುತ್ತವೆ. ಮುಕ್ತ ಮಾರುಕಟ್ಟೆ ಸಾಲವನ್ನು ರಾಜ್ಯ ಸರ್ಕಾರವು ನೇರವಾಗಿ ಪಡೆಯಲು ಬರುವುದಿಲ್ಲ.

ಮೊದಲಿಗೆ, ಕರ್ನಾಟಕ ರಾಜ್ಯವು ಸೇರಿದಂತೆ ಇತರೆ ರಾಜ್ಯಗಳು ಭಾರತ ಸರ್ಕಾದಿಂದ ಸಂವಿಧಾನದ ಆರ್ಟಿಕಲ್ 293(3) ರಡಿ ಸಾಲ ಪಡೆಯಲು ಅನುಮೋದನೆ ಪಡೆಯಲಾಗುತ್ತದೆ. ನಂತರ, ರಾಜ್ಯ ಸರ್ಕಾರದ ಪರವಾಗಿ ಭಾರತೀಯ ರಿಸರ್ವ್ ಬ್ಯಾಂಕ್ (RBI) ಭದ್ರತಾ ಪತ್ರ/ SDL ಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಹರಾಜು ಮಾಡುತ್ತದೆ. ಹರಾಜು ಮಾಡುವ ಮುನ್ನ ಪ್ರಮುಖ ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುತ್ತದೆ.

ಸದರಿ ಹರಾಜಿನಲ್ಲಿ ಸ್ಪರ್ಧಾತ್ಮಕ ಬಿಡ್ **(Competitive Bidding) ಮತ್ತು** ಸ್ಪರ್ಧಾತ್ಮಕವಲ್ಲದ ಬಿಡ್ **(Non-Competitive Bidding) ಗಳಿರುತ್ತದೆ.** ಸ್ಪರ್ಧಾತ್ಮಕ ಬಿಡ್ **(Competitive Bidding)** ನಲ್ಲಿ ಸಂಸ್ಥೆಗಳು ಅಂದರೆ ಬ್ಯಾಂಕ್

ಮತ್ತು ಇತರೆ ಸಂಸ್ಥೆಗಳು (Financial institutions)ಭಾಗವಹಿಸುತ್ತವೆ. ಸ್ಪರ್ಧಾತ್ಮಕವಲ್ಲದ ಬಿಡ್ (**Non-Competitive Bidding**) ನಲ್ಲಿ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಪತ್ರಿಕೆಗಳಲ್ಲಿನ ಮಾಹಿತಿಯನ್ನು ಆಧಾರಿಸಿ, ಸಾರ್ವಜನಿಕರು, ಸ್ಪರ್ಧಾತ್ಮಕವಲ್ಲದ ಬಿಡ್ (**Non-Competitive Bidding**) ನಲ್ಲಿ ಭಾಗವಹಿಸಲು RBI ವೆಬ್ ಸೈಟ್ ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಸರ್ಕಾರ ಯಾವುದೇ ರಿಯಾಯಿತಿ ನೀಡುವುದಿಲ್ಲ. ಬಡ್ಡಿದರವು ಸಾಲದ ಮೊತ್ತ, ಸಾಲದ ಅವಧಿ, ಸಾಲ ಪಡೆಯುವ ಮಾಹೆ ಮತ್ತು ಬಿಡ್ (ಸ್ಪರ್ಧಾತ್ಮಕ/ಸ್ಪರ್ಧಾತ್ಮಕವಲ್ಲದ) ಮೇಲೆ ಅವಲಂಬಿತವಾಗಿರುತ್ತದೆ.

ಈ ರೀತಿ ಮುಕ್ತ ಮಾರುಕಟ್ಟೆಯಲ್ಲಿ ಪಡೆದ ಸಾಲವನ್ನು ಸ್ವೀಕೃತಿ ಲೆಕ್ಕ ಶೀರ್ಷಿಕೆ ಲೆಕ್ಕ ಶೀರ್ಷಿಕೆ-6003-00-101-3-05 ಗೆ ಜಮಾ ಮಾಡಲಾಗುತ್ತದೆ. ವಿವರಗಳು ಕೆಳಕಂಡಂತೆ ಇದೆ.

| ವರ್ಷ | ಮೊತ್ತ (ರೂ. ಕೋಟಿಗಳಲ್ಲಿ) | ಜಿ.ಎಸ್.ಡಿ.ಪಿಯ ಶೇಕಡವಾರು |
|---|---|---|
| 2019-20 | 48500.00 | 2.25% |
| 2020-21 | 69000.00 | 3.72%, (*) |
| 2021-22 | 22000.00 ದಿಸೆಂಬರ್-21 ರ ಅಂತ್ಯಕ್ಕೆ | 0.89%, |

ಕೋವಿಡ್-19 ಹಿನ್ನಲೆಯಲ್ಲಿ, ರಾಜಸ್ವ ಸ್ವೀಕೃತಿಗಳು ಕುಂಠಿತವಾದ ಹಿನ್ನಲೆಯಲ್ಲಿ, ಕೇಂದ್ರ ಸರ್ಕಾರವು ಜಿ.ಎಸ್.ಡಿ.ಪಿಯ ಶೇ.5.0% ರವರಗೆ ಸಾಲ ಪಡೆಯಲು ಅವಕಾಶ ಕಲ್ಪಿಸಿತ್ತು. ಅದರನ್ವಯ ರಾಜ್ಯ ಸರ್ಕಾರವು, ಜಿ.ಎಸ್.ಡಿ..ಪಿಯ ಶೇ 5.0% ರವರಗೆ ಸಾಲ ಪಡೆಯಲು ಉಭಯ ಸದನಗಳ ಅನುಮೋದನೆ ಪಡೆದಿರುತ್ತದೆ.

**ಸಂಖ್ಯೆ: ಆಇ 11 ಆಖಇ 2022.**